# ಮಾರ್ಕ್ ಕಬ್ಬನರ ಕಂಚಿನ ಪುತ್ಥಳಿ ಸುತ್ತ ಒಂದು ನೋಟ

**ಸುಷ್ಮಾ ಹೆಚ್.**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದೊಡ್ಡಬಳ್ಳಾಪುರ.

DOI: https://doi.org/10.5281/zenodo.17960306

## ABSTRACT:

ಬೆಂಗಳೂರಿನ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಬ್ರಿಟಿಷ್ ಕಮಿಷನರ್ ಸರ್ ಮಾರ್ಕ್ ಕಬ್ಬನ್ (1834–1861) ರವರ ಅಶ್ವಾರೋಹಿ ಕಂಚಿನ ಪುತ್ಥಳಿಯ ಸ್ಥಾಪನೆ ಮತ್ತು ವಿವಾದಾತ್ಮಕ ಸ್ಥಳಾಂತರದ ಕುರಿತು ಈ ಲೇಖನವು ವಿಶ್ಲೇಷಿಸುತ್ತದೆ. 1866 ರಲ್ಲಿ ಅಠಾರ ಕಚೇರಿಯ (ಈಗಿನ ಹೈಕೋರ್ಟ್) ಮುಂಭಾಗದಲ್ಲಿ ಸ್ಥಾಪಿಸಲಾದ ಈ ಪ್ರತಿಮೆಯು, 1956 ರ ನಂತರ ವಿಧಾನಸೌಧದ ಪ್ರಾಮುಖ್ಯತೆಯಿಂದಾಗಿ ಹೈಕೋರ್ಟ್‌ನ ಹಿಂಭಾಗದಲ್ಲಿ ಉಳಿಯಿತು. ಕಬ್ಬನ್ ಪಾರ್ಕ್‌ಗೆ ಅವರ ಹೆಸರನ್ನು ಇಡಲು ಕಾರಣವಾದ ಮೀಡ್‌ನ ನಿರ್ಧಾರ ಮತ್ತು ಕಬ್ಬನ್‌ನ ರಾಜೀನಾಮೆ ಪ್ರಯತ್ನಗಳಂತಹ ಇತಿಹಾಸದ ಅಂಶಗಳನ್ನು ಇದು ಪರಿಶೀಲಿಸುತ್ತದೆ. ಪುತ್ಥಳಿಯನ್ನು ಮ್ಯೂಸಿಯಂಗೆ ಸ್ಥಳಾಂತರಿಸಲು ಕನ್ನಡಪರ ಸಂಘಟನೆಗಳ ನಿರಂತರ ಹೋರಾಟ, ಹಾಗೂ ಹೈಕೋರ್ಟ್ ಆವರಣದಲ್ಲಿ ಪುತ್ಥಳಿಯ ಉಪಸ್ಥಿತಿಯಿಂದಾದ ಸಮಸ್ಯೆಗಳನ್ನು ವಿವರಿಸಿ, ಅಂತಿಮವಾಗಿ 2020 ರಲ್ಲಿ ಅದನ್ನು ಕಬ್ಬನ್ ಪಾರ್ಕ್‌ನ ವೃಂದಾವನಕ್ಕೆ (Bandstand) ಸ್ಥಳಾಂತರಿಸಿದ ನಿರ್ಧಾರವನ್ನು ಚರ್ಚಿಸುತ್ತದೆ.

## KEYWORDS:

ಮಾರ್ಕ್ ಕಬ್ಬನ್, ಬೆಂಗಳೂರು ಇತಿಹಾಸ, ಅಠಾರ ಕಚೇರಿ, ಕಬ್ಬನ್ ಪಾರ್ಕ್, ಪುತ್ಥಳಿ ಸ್ಥಳಾಂತರ.

ಯಲಹಂಕ ನಾಡಪ್ರಭುಗಳ ಆರಂಭಿಕ ರಾಜಧಾನಿಯಾಗಿ ಮೊದಲನೇ ಕೆಂಪೇಗೌಡರಿಂದ ನಿರ್ಮಾಣವಾದ ಬೆಂಗಳೂರು, ತನ್ನ ಆಯಕಟ್ಟಿನ ವಾಸ್ತವ್ಯ ಮತ್ತು ತಂಪಾದ ಹವೆಯಿಂದಾಗಿ 19ನೇ ಶತಮಾನದ ಹೊತ್ತಿಗೆ ವ್ಯಾಪಾರ ಕೇಂದ್ರವಾಗಿ ಪ್ರಮುಖ ಪಟ್ಟಣವಾಗಿ ರೂಪಗೊಂಡಿತು. ಹೈದರ್ ಮತ್ತು ಟಿಪ್ಪುವಿನ ವಿಶೇಷ ಕಾಳಜಿಯಲ್ಲಿ ಬೆಳೆದ ಬೆಂಗಳೂರು, ನಂತರದಲ್ಲಿ ವಸಾಹತು ಆಳ್ವಿಕೆ ಸಂದರ್ಭದಲ್ಲಿ ಬ್ರಿಟಿಷ್ ಕಮೀಷನರ್‌ಗಳು ಮತ್ತು ಮೈಸೂರು ಅರಸರುಗಳು ನೇಮಿಸಿದ ದಿವಾನರುಗಳ ಆಳ್ವಿಕೆಗೆ ಒಳಪಟ್ಟು ಹಂತ ಹಂತವಾಗಿ ಬೆಳೆದು ಇಂದು ಜಗತ್ತಿನ ಪ್ರಸಿದ್ಧ ಐಟಿ ಕೇಂದ್ರವಾಗಿ ಗುರುತಿಸಿಕೊಂಡಿದೆ. ಬೆಂಗಳೂರಿನ ಹಿಂದಿನ ಬೆಳವಣಿಗೆಗೆ ಹಲವಾರು ರಾಜರು, ಬ್ರಿಟಿಷ್ ಅಧಿಕಾರಿಗಳು, ದಿವಾನರುಗಳು ಕಾರಣವಾಗಿದ್ದು, ಸರ್.ಮಾರ್ಕ್ ಕಬ್ಬನ್ ಅವರುಗಳಲ್ಲಿ ಪ್ರಮುಖರು.

ಬೆಂಗಳೂರನ್ನು ಆಳಿದ ಕಮಿಷನರ್‌ಗಳಲ್ಲೇ ಪ್ರಮುಖರಾದ ಮಾರ್ಕ್ ಕಬ್ಬನ್ ರವರ ಪ್ರಗತಿಪರ ಮತ್ತು ಸಮಾಜಮುಖಿ ಆಡಳಿತದ ಕುರುಹಾಗಿ ಮಾರ್ಕ್ ಕಬ್ಬನ್‌ರವರ ಅಶ್ವರೋಹಿ ಕಂಚಿನ ಮೂರ್ತಿಯು ಕಬ್ಬನ್ ಪಾರ್ಕಿನ ವೃಂದಾರಂಗದ ಮುಂಭಾಗದಲ್ಲಿ ನಿಂತಿದೆ. ಹೈಕೋರ್ಟ್‌ನ ಹಿಂಭಾಗದಲ್ಲಿದ್ದ ಈ ಕಂಚಿನ ಮೂರ್ತಿಯನ್ನು 29 ಜೂನ್ 2020 ರಂದು ಕಬ್ಬನ್ ಪಾರ್ಕಿಗೆ ಸ್ಥಳಾಂತರಿಸಲಾಯಿತು.

ಕ್ರಿ.ಶ. 1785 ರಲ್ಲಿ ಐಲ್ ಆಫ್ ಮ್ಯಾನ್ ಎಂಬಲ್ಲಿ ಜನಿಸಿದ ಮಾರ್ಕ್ ಕಬ್ಬನ್, ಮಾರ್ಕ್ ಕಬ್ಬನ್‌ನ ತಂದೆ ಒಬ್ಬ ಕ್ಲರ್ಜಿ ಮ್ಯಾನ್ ಆಗಿದ್ದನು. ಕ್ರಿ.ಶ. 1801 ರಲ್ಲಿ ಅಂದರೆ ತನ್ನ 16ನೇ ವಯಸ್ಸಿನಲ್ಲಿ ಭಾರತಕ್ಕೆ ಬಂದ ಮಾರ್ಕ್ ಕಬ್ಬನ್ ಮೈಸೂರಿನಲ್ಲಿ ಮೇಜರ್ ಆಗಿದ್ದ ತನ್ನ ಚಿಕ್ಕಪ್ಪ ವಿಲ್ಕಿನ್ಸನ್ (Wilkinson) ಸಹಾಯದಿಂದ ಬ್ರಿಟಿಷ್ ಆಳ್ವಿಕೆಯಲ್ಲಿ ಕೆಲಸಕ್ಕೆ ಸೇರಿದನು. ಕ್ರಿ.ಶ. 1810 ರಲ್ಲಿ ಆಹಾರ ಸರಬರಾಜು ಇಲಾಖೆಯ ಕೆಲಸಕ್ಕೆ ಸೇರಿದ ಇವನನ್ನು ನಂತರ ಹುಣಸೂರಿನ ಕಮಿಷನರೇಟ್ ಇಲಾಖೆಗೆ ವರ್ಗಾಯಿಸಲಾಯಿತು.

ಹುಣಸೂರಿನ ಅಧಿಕಾರಿ ಕೊಲ್ನೆಲ್ ಮೋರಿಸ್‌ರವರು ತಿರುವಂಕೂರಿನ ಪ್ರೆಸಿಡೆಂಟ್ ಆಗಿ ನೇಮಕವಾದ ನಂತರ ಹುಣಸೂರಿನ ಕಮಿಷನರೇಟ್ ಇಲಾಖೆಯ ಮುಖ್ಯಸ್ಥರಾಗಿ ಕಬ್ಬನ್ ನೇಮಕವಾದರು. ಅನಂತರ ಕಮಿಷನರ್ ಪದವಿಗೇರಿದರು. ನಂತರ ಜೂನಿಯರ್ ಕಮಿಷನರ್ ಆಗಿ ನೇಮಕವಾದ ಕಬ್ಬನ್ 1834ರಲ್ಲಿ ಮುಖ್ಯ ಕಮಿಷನರ್ ಹುದ್ದೆಗೆ ಬಡ್ತಿ ಹೊಂದಿದರು. ಕ್ರಿ.ಶ.1834 ರಿಂದ 1861 ರವರೆಗೆ ಒಟ್ಟು 27 ವರ್ಷಗಳ ಸುದೀರ್ಘ ಕಾಲ ಕಬ್ಬನ್ ಬೆಂಗಳೂರಿನ ಕಮೀಷನರ್ ಆಗಿದ್ದರು.

ಕ್ರಿಸ್ತಶಕ 1860ರಲ್ಲಿ ಮೈಸೂರು ರಾಜ್ಯದ ಮೇಲ್ವಿಚಾರಣೆಯನ್ನು ಕೇಂದ್ರ ಸರ್ಕಾರದ ಹಿಡಿತದಿಂದ ತಪ್ಪಿಸಿ ಮದ್ರಾಸ್ ಸರ್ಕಾರದ ವಶಕ್ಕೆ ಕೊಡಲು ಪ್ರಯತ್ನಗಳು ನಡೆದಾಗ ಕಬ್ಬನ್ ಇದನ್ನು ವಿರೋಧಿಸಿ ತಮ್ಮ ರಾಜೀನಾಮೆ ಪತ್ರವನ್ನು ಗವರ್ನರ್ ಜನರಲ್ ಲಾರ್ಡ್ ಕ್ಯಾನಿಂಗ್‌ನಿಗೆ ಬರೆದರು. ಈ ಪ್ರಕ್ರಿಯೆಯನ್ನು ವಿರೋಧಿಸಿ ಅಂದಿನ ಮೈಸೂರು ಸಂಸ್ಥಾನದ ರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಸಹ ಬ್ರಿಟಿಷ್ ಸರ್ಕಾರಕ್ಕೆ ಪತ್ರ ಬರೆದರು. ಕೊನೆಗೆ ಕ್ರಿಸ್ತಶಕ 1860 ಜೂನ್ 28ರಲ್ಲಿ ಇಂಗ್ಲೆಂಡ್ ಸರ್ಕಾರದಿಂದ ಅಪ್ಪಣೆ ಹೊರಬಂದು ಮೈಸೂರು ರಾಜ್ಯ ಮದ್ರಾಸ್ ಸರ್ಕಾರಕ್ಕೆ ಒಳಪಡುವ ಅವಶ್ಯಕತೆ ಇಲ್ಲ ಎಂದು ತಿಳಿಸಿದರು. ಆಗ ಸಂತೋಷಗೊಂಡ ಕಬ್ಬನ್ ತನ್ನ ರಾಜೀನಾಮೆಯನ್ನು ಹಿಂಪಡೆದು ಮುಖ್ಯ ಕಮಿಷನರ್ ಆಗಿ ಮುಂದುವರೆದರು. ಆದರೆ 1861ರ ಆರಂಭದಲ್ಲಿ ತಮ್ಮ 75ನೇ ವಯಸ್ಸಿನಲ್ಲಿ ತೀವ್ರ ಅನಾರೋಗ್ಯಕ್ಕೆ ಒಳಗಾದ ಕಬ್ಬನ್ ದಿನಾಂಕ 1ನೇ ಮಾರ್ಚ್ 1861 ರಲ್ಲಿ ತಮ್ಮ ರಾಜೀನಾಮೆ

ಪತ್ರವನ್ನು ಅಂದಿನ ಮೈಸೂರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ ಕಳುಹಿಸಿದರು. ಮಹಾರಾಜರೊಂದಿಗೆ ಕಬ್ಬನ್‌ರವರ ಸಂಬಂಧ ಸ್ನೇಹಪೂರಕವಾಗಿತ್ತು. ಮಹಾರಾಜರನ್ನು ಭೇಟಿ ಮಾಡುವಷ್ಟು ಆರೋಗ್ಯವಿಲ್ಲದೆ ಹೊರಟ ಮಾರ್ಕ್ ಕಬ್ಬನ್ ರವರಿಗೆ ಮಹಾರಾಜರು ಪತ್ರ ಬರೆದು, ನನ್ನನ್ನು ವೈಯಕ್ತಿಕವಾಗಿ ಭೇಟಿ ಮಾಡದೆ ತಮ್ಮ ಸ್ನೇಹಪೂರ್ವಕ ಬೀಳ್ಕೊಡುಗೆಯನ್ನು ಪಡೆಯಲು ಸಾಧ್ಯವಾಗದೇ ಇರುವ ಮಾರ್ಕ್ ಕಬ್ಬನ್ ರವರ ಆರೋಗ್ಯದ ಬಗ್ಗೆ ಬೇಸರ ವ್ಯಕ್ತಪಡಿಸಿದರು.[1] ದಿನಾಂಕ 16ನೇ ಮಾರ್ಚ್ 1861 ರಂದು ಬೆಂಗಳೂರನ್ನು ಬಿಟ್ಟು ಮದ್ರಾಸ್‌ಗೆ ತೆರಳಿದ ಮಾರ್ಕ್ ಕಬ್ಬನ್ ಅಲ್ಲಿಂದ ತಮ್ಮ ತವರಿನತ್ತ ಹೊರಟರು. ಆದರೆ ಇಂಗ್ಲೆಂಡ್‌ನಿಗೆ ತೆರಳುವ ಮೊದಲೇ ಮಾರ್ಗ ಮಧ್ಯದಲ್ಲಿ ಸೂಯಾಜ್‌ನ ಬಳಿ ಮರಣ ಹೊಂದಿದರು. 13ನೇ ಏಪ್ರಿಲ್ 1861ರಲ್ಲಿ ಅಸು ನೀಗಿದ ಕಬ್ಬನ್ ರವರ ಪಾರ್ಥಿವ ಶರೀರವನ್ನು ಡಾ. ಚಾಂಪ್ ಬೆಲ್, ಮೈಸೂರು ದರ್ಬಾರ್‌ನ ಶಸ್ತ್ರ ಚಿಕಿತ್ಸಕರು, ಕಬ್ಬನ್ ಅವರ ಊರಾದ ಐಸಲ್ ಆಫ್ ಮ್ಯಾನ್‌ಗೆ ತಲುಪಿಸಿದರು.[2] ಅಲ್ಲಿ ಅವರ ಅಂತ್ಯಕ್ರಿಯೆ ನೆರವೇರಿತು.

ಮಾರ್ಕ್ ಕಬ್ಬನ್ ರವರ ನಂತರ ಹೊಸ ಕಮಿಷನರ್ ಆಗಿ ಬಂದ ಬೆಂಥಾಮ್ ಬೌರಿಂಗ್ ದಿನಾಂಕ 16ನೇ ಆಗಸ್ಟ್ 1862 ರಂದು ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅಶ್ವರೋಹಿ ಮಾರ್ಕ್ ಕಬ್ಬನ್ ಆಳೆತ್ತರದ ಕಂಚಿನ ವಿಗ್ರಹವನ್ನು ಆ ಕಾಲದ ಪ್ರಸಿದ್ಧ ಶಿಲ್ಪಿಯಾದ ಬ್ಯಾರನ್ ಮಾರೋಚೆಟ್ಟಿಯಿಂದ ಮಾಡಿಸಿ ಹೊಸ ಸರ್ಕಾರಿ ಕಚೇರಿ (ಅಠಾರ ಕಚೇರಿ)ಯ ಮುಂಭಾಗದಲ್ಲಿ ನಿಲ್ಲಿಸಲು ತೀರ್ಮಾನಿಸಲಾಯಿತು. ಈ ಶಿಲ್ಪದ ನಿರ್ಮಾಣಕ್ಕಾಗಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಹತ್ತು ಸಾವಿರ ರೂ.ಗಳನ್ನ ದೇಣಿಗೆಯಾಗಿ ನೀಡಿದರು. ಬ್ಯಾರನ್ ಮಾರೋಚೆಟ್ಟಿ ಅಂದಿನ ವಿಶ್ವಪ್ರಸಿದ್ಧ ಶಿಲ್ಪಗಾರನಾಗಿದ್ದು, ಮಾರ್ಕ್ ಕಬ್ಬನ್ ಮೂರ್ತಿ ಸೇರಿ ಮೂರು ಅಶ್ವರೋಹಿ ಶಿಲ್ಪಗಳನ್ನು ನಿರ್ಮಿಸಿದ್ದಾನೆ.

ಕ್ರಿಸ್ತಶಕ 1864 ರಲ್ಲಿ ಇಂಗ್ಲೆಂಡ್‌ನಲ್ಲಿ ಮಾರ್ಕ್ ಕಬ್ಬನ್ ಕಂಚಿನ ಪ್ರತಿಮೆಯನ್ನು ನಿರ್ಮಿಸಿ ಅದನ್ನು ಭಾರತಕ್ಕೆ ಕಳುಹಿಸಲಾಯಿತು. ಆದರೆ ಆಕಸ್ಮಿಕವಾಗಿ ಹಡಗು ದುರಂತಕ್ಕೀಡಾಗಿದ್ದರಿಂದ ಪ್ರತಿಮೆಯು 1865 ರಲ್ಲಿ ಮದ್ರಾಸ್ ತಲುಪಿತು. 1866 ರಲ್ಲಿ ಬೆಂಗಳೂರನ್ನು ತಲುಪಿದ ಈ ಪ್ರತಿಮೆಯನ್ನು ಅಂದು ಹೊಸದಾಗಿ ನಿರ್ಮಿಸಲಾಗುತ್ತಿದ್ದ ಅಠಾರ ಕಚೇರಿಯ ಮುಖ್ಯ ದ್ವಾರದ ಮುಂಭಾಗದಲ್ಲಿ ದಿನಾಂಕ 16 ಮಾರ್ಚ್ 1866 ರಂದು ಸ್ಥಾಪಿಸಲಾಯಿತು.[3] ಕ್ರಿ.ಶ 1868ರಲ್ಲಿ ಅಠಾರ ಕಚೇರಿಯ ನಿರ್ಮಾಣವು ಮುಕ್ತಾಯವಾಗಿ ಇಲಾಖೆಗಳನ್ನು ಇಲ್ಲಿಗೆ ಸ್ಥಳಾಂತರಿಸಲಾಯಿತು. ಈ ಜಾಗವು ಮಾರ್ಕ್ ಕಬ್ಬನ್ ವಾಸವಿದ್ದ ಮನೆಯಿಂದ ಕೆಲವು ಫರ್ಲಾಂಗುಗಳಷ್ಟು ದೂರವಿದ್ದ ವಿಶಾಲ ಸ್ಥಳವಾಗಿತ್ತು. ಕಂಚಿನ ವಿಗ್ರಹ ಸ್ಥಾಪನೆ ಮಾಡಿದ ಆ ದಿನದ ಭಾವಚಿತ್ರವು Illustrated London News ಪತ್ರಿಕೆಯಲ್ಲಿ ಮೇ 5, 1866 ರಂದು ವರದಿಯಾಗಿದೆ. ಈ ಭಾವಚಿತ್ರವನ್ನು ಬೆಂಗಳೂರಿನ ಛಾಯಾಚಿತ್ರರಾದ Orr and Burton ಎಂಬವರು ಸೆರೆಹಿಡಿದು ಲಂಡನ್ ನ್ಯೂಸ್ ಪತ್ರಿಕೆಗೆ ಕಳುಹಿಸಿದರು.[4]

ಮಾರ್ಕ್ ಕಬ್ಬನ್‌ನ ಶಿಲ್ಪವು ಸ್ಥಾಪನೆಯಾದ ಸಂದರ್ಭದಲ್ಲಿ ಅಠಾರ ಕಚೇರಿಯ ನಿರ್ಮಾಣ ಕಾರ್ಯವು ಇನ್ನೂ ನಡೆಯುತ್ತಿತ್ತು. ಕ್ರಿಸ್ತಶಕ 1868ರಲ್ಲಿ ಅಠಾರ ಕಚೇರಿಯ ನಿರ್ಮಾಣವು ಮುಕ್ತಾಯವಾಗಿ, ಬೆಂಗಳೂರಿನ ಟಿಪ್ಪು ಅರಮನೆಯಲ್ಲಿ ನಡೆಯುತ್ತಿದ್ದ ಇಲಾಖೆಗಳನ್ನು ಇಲ್ಲಿಗೆ ಸ್ಥಳಾಂತರಿಸಲಾಯಿತು. ಕಬ್ಬನ್ ರವರ ಶಿಲ್ಪವು ಸ್ಥಾಪನೆಯಾದ ಕಾಲದಲ್ಲಿ ಇದು ಅಠಾರ ಕಚೇರಿಯ ಮುಂಭಾಗವಾಗಿದ್ದು ಕಬ್ಬನ್ ಪಾರ್ಕಿಗೆ ಮುಖ ಮಾಡಿ ನಿಂತಿತ್ತು. ಆದರೆ ಕಬ್ಬನ್ ರವರ ಶಿಲ್ಪವು ಸ್ಥಾಪನೆಯಾದ ಕಾಲದಲ್ಲಿ ಕಬ್ಬನ್ ಪಾರ್ಕ್ ಎಂಬ ಕಲ್ಪನೆ ಇರಲಿಲ್ಲ. ಇಂದಿನ ಮಾಣಿಕ್ ಷಾ ಪೆರೇಡ್ ಅಂದರೆ ಕಂಟೋನ್ಮೆಂಟ್ ಏರಿಯಾಗೆ

ಮುಖ ಮಾಡಿದ ವಿಶಾಲ ಸ್ಥಳದಲ್ಲಿ ಕಬ್ಬನ್‌ರ ಶಿಲ್ಪವು ಸ್ಥಾಪನೆಯಾಗಿತ್ತು.

ಅಧಿಕೃತವಾಗಿ ಶ್ರೀ ಚಾಮರಾಜೇಂದ್ರ ಪಾರ್ಕ್ ಎಂದು ಕರೆಸಿಕೊಳ್ಳುವ ಇಂದಿನ ಕಬ್ಬನ್ ಪಾರ್ಕ್ ಅನ್ನು ಕ್ರಿಸ್ತಶಕ 1870ರಲ್ಲಿ ಮೈಸೂರು ರಾಜ್ಯದ ಬ್ರಿಟಿಷ್ ಚೀಫ್ ಇಂಜಿನಿಯರ್ ಆಗಿದ್ದ ಮೇಜರ್ ಜನರಲ್ ರಿಚರ್ಡ್ ಸ್ಯಾಂಕಿ ಪ್ರಾರಂಭಿಸಿದನು. ಈತನು ಪ್ರಾರಂಭಿಸಿದ ಕಾಲದಲ್ಲಿ 100 ಎಕರೆಗಳ ಪ್ರದೇಶ ಮಾತ್ರ ಈ ಪಾರ್ಕ್ಗೆ ಸೇರಿತ್ತು. ಕ್ರಿ.ಶ.1870 ರಿಂದ 1875 ರವರೆಗೆ ಮೈಸೂರು ರಾಜ್ಯದ ಚೀಫ್ ಕಮಿಷನರ್ ಆಗಿದ್ದ ಸರ್ ರಿಚರ್ಡ್ ಮೀಡ್ ರವರ ಕಾಲದಲ್ಲಿ ಈ ಪಾರ್ಕ್ಗೆ 300 ಎಕರೆಗಳ ಜಾಗ ನೀಡಿ 'ಮೀಡ್ಸ್ ಪಾರ್ಕ್' ಎಂದು ಕಮಿಷನರ್‌ನ ಹೆಸರನ್ನ ಇಡಲಾಯಿತು. ಆದರೆ ಈ ಪಾರ್ಕಿಗೆ ತಮ್ಮ ಹೆಸರಿಟ್ಟಿರುವುದು ಸರಿಯಲ್ಲ. ದೀರ್ಘಾವಧಿ ಕಮಿಷನರ್ ಆಗಿ ಕಾರ್ಯನಿರ್ವಹಿಸಿ ಹೆಚ್ಚು ಜನಪ್ರಿಯತೆ ಗಳಿಸಿದ್ದ ಸರ್ ಮಾರ್ಕ್ ಕಬ್ಬನ್ ರವರ ಹೆಸರು ಇಡುವುದು ಸೂಕ್ತ ಎಂದು ತೀರ್ಮಾನಿಸಿ, ತಾವು ಬರೋಡ ಸಂಸ್ಥಾನಕ್ಕೆ ವರ್ಗಾವಣೆಗೊಂಡು ತೆರಳುವ ಮೊದಲು 1870ರಲ್ಲಿ ಈ ಪಾರ್ಕಿಗೆ ಕಬ್ಬನ್ ಪಾರ್ಕ್ ಎಂದು ಹೆಸರಿಟ್ಟರು. ಕ್ರಿ.ಶ.1866 ರಲ್ಲಿ ಅಠಾರ ಕಚೇರಿಯ ಮುಂಭಾಗದಲ್ಲಿ ಕಬ್ಬನ್‌ನ ಶಿಲ್ಪ ಸ್ಥಾಪಿಸುವಾಗ ಅಲ್ಲಿ ಕಬ್ಬನ್ ಪಾರ್ಕ್ ಇರಲಿಲ್ಲ. ಆ ಜಾಗ ಮಾರ್ಕ್ ಕಬ್ಬನ್ ರವರು ವಾಸವಿದ್ದ ಮನೆಯಿಂದ ಕೆಲ ಫರ್ಲಾಂಗ್ ದೂರವಿದ್ದು ಬಯಲು ಪ್ರದೇಶವಾಗಿತ್ತು. ಅಠಾರ ಕಚೇರಿಯ ನಿರ್ಮಾಣದ ಬಗ್ಗೆ ಮಾರ್ಕ್ ಕಬ್ಬನ್‌ನ ಕಾಲದಲ್ಲಿಯೇ ರೂಪರೇಷೆಗಳು ಆರಂಭವಾಗಿದ್ದವು. ಅಠಾರ ಕಚೇರಿಯನ್ನು ಇಲ್ಲಿಯೇ ನಿರ್ಮಾಣ ಮಾಡಬೇಕೆಂದು ಮೊದಲು ನಿರ್ಧರಿಸಿದ್ದು ಮಾರ್ಕ್ ಕಬ್ಬನ್ ರವರು. ಬೆಂಗಳೂರಿನ ಕಂಟೋನ್ಮೆಂಟ್ ಪ್ರದೇಶದ ಪೆರೇಡ್ ಮೈದಾನಕ್ಕೆ ಮುಖ ಮಾಡಿ ಅಠಾರ ಕಚೇರಿಯನ್ನು ನಿರ್ಮಿಸಬೇಕೆಂಬುದು ಮಾರ್ಕ್ ಕಬ್ಬನ್‌ರವರ ಆಶಯವಾಗಿತ್ತು.

ಹೀಗೆ ಅಠಾರ ಕಚೇರಿಯ ಮುಂಭಾಗದಲ್ಲಿ ಮಾರ್ಕ್ ಕಬ್ಬನ್‌ರ ಮೂರ್ತಿ 1866 ರಲ್ಲಿ ಸ್ಥಾಪಿಸಲ್ಪಟ್ಟಿತು. 1917ರಲ್ಲಿ ಅಠಾರ ಕಚೇರಿಯನ್ನು ವಿಸ್ತರಿಸುವ ಉದ್ದೇಶದಿಂದ ಈಗಾಗಲೇ ಇದ್ದ ಕಚೇರಿಯ ಕಟ್ಟಡದ ತದ್ರೂಪಿನಲ್ಲಿ, ಇರುವ ಕಟ್ಟಡಕ್ಕೆ ಹೊಂದಿಕೊಂಡಂತೆ ಮತ್ತೊಂದು ಕಟ್ಟಡವನ್ನು ಕಟ್ಟಲಾಯಿತು. ನಂತರ ಭಾರತ ಸ್ವಾತಂತ್ರ್ಯ ಪಡೆದ ನಂತರ 1956ರಲ್ಲಿ ಕೆಂಗಲ್ ಹನುಮಂತಯ್ಯನವರ ಮುಂದಾಳತ್ವದಲ್ಲಿ ವಿಧಾನಸೌಧ ಕಟ್ಟಡವು ಅಠಾರ ಕಚೇರಿಯ ಹಿಂಭಾಗದಲ್ಲಿ ನಿರ್ಮಾಣವಾಯಿತು. ವಿಧಾನಸೌಧ ನಿರ್ಮಾಣವಾದ ನಂತರ ಅಠಾರ ಕಚೇರಿಯಲ್ಲಿದ್ದ ಆಡಳಿತ ಕಚೇರಿಗಳು ವಿಧಾನಸೌಧಕ್ಕೆ ವರ್ಗಾವಣೆಗೊಂಡು ಅಠಾರ ಕಚೇರಿ ಖಾಲಿಯಾಯಿತು. ನಂತರ ಖಾಲಿ ಇದ್ದ ಅಠಾರ ಕಚೇರಿಗೆ ಕರ್ನಾಟಕ ಉಚ್ಚ ನ್ಯಾಯಾಲಯವು ವರ್ಗಾವಣೆಗೊಂಡಿತು. ಅಠಾರ ಕಚೇರಿಯ ಹಿಂಭಾಗದಲ್ಲಿ ವಿಧಾನಸೌಧ ನಿರ್ಮಾಣಗೊಂಡು ಆಡಳಿತ ಕಚೇರಿಗಳು ವಿಧಾನಸೌಧಕ್ಕೆ ವರ್ಗಾವಣೆಯಾದ ನಂತರ ವಿಧಾನಸೌಧವು ಮುಖ್ಯವಾಯಿತು. ವಿಧಾನಸೌಧದ ಮುಂಭಾಗದ ಇಂದಿನ ಡಾ. ಅಂಬೇಡ್ಕರ್ ರಸ್ತೆಯು ಕೇಂದ್ರವಾಯಿತು. 1956ಕ್ಕೂ ಮೊದಲು ಅಠಾರ ಕಚೇರಿಯ ಮುಂಭಾಗವಾಗಿದ್ದ ಜಾಗ ಈಗ ಹಿಂಭಾಗವಾಗಿ, ಹಿಂಭಾಗದ ವಿಧಾನಸೌಧದ ಎದುರಿನ ಜಾಗ ಈಗ ಮುಂಭಾಗವಾಗಿದೆ. 1866 ರಲ್ಲಿ ಅಠಾರ ಕಚೇರಿಯ ಮುಂಭಾಗದಲ್ಲಿ ಸ್ಥಾಪನೆಯಾಗಿದ್ದ ಮಾರ್ಕ್ ಕಬ್ಬನ್ ರವರ ಶಿಲ್ಪವು ಹೈಕೋರ್ಟ್‌ನ ಹಿಂಭಾಗದಲ್ಲಿ ಇರಲು ಇದೇ ಕಾರಣ.

1960ರ ದಶಕದಲ್ಲಿ ವಾಟಾಳ್ ಪಕ್ಷದ ನಾಯಕ ವಾಟಾಳ್ ನಾಗರಾಜ್ ಮತ್ತು ಇತರೆ ಕನ್ನಡಪರ ಸಂಘಟನೆಗಳು ವಸಾಹತು ಆಳ್ವಿಕೆಯ ವಿದೇಶಿಯರ ಶಿಲ್ಪಗಳನ್ನು ಸಾರ್ವಜನಿಕ ಸ್ಥಳಗಳಿಂದ ತೆಗೆದು ಮ್ಯೂಸಿಯಂಗಳಿಗೆ ಸ್ಥಳಾಂತರಿಸಬೇಕು ಎಂಬ ಕೂಗು ಆರಂಭಿಸಿದರು.

ಇದರಲ್ಲಿ ಮಾರ್ಕ್ ಕಬ್ಬನ್, ವಿಕ್ಟೋರಿಯಾ ರಾಣಿಯ ಮೂರ್ತಿಗಳು ಸೇರಿದ್ದವು. 1977ರಲ್ಲಿ ಕರ್ನಾಟಕ ಸರ್ಕಾರ ಸಹ ಇವರ ಬೇಡಿಕೆಗೆ ಮಣಿದು ವಿದೇಶಿಯ ಶಿಲ್ಪಗಳನ್ನು ಸ್ಥಳಾಂತರಿಸಲು ಆದೇಶವನ್ನು ಹೊರಡಿಸಿತ್ತು. ಆದರೆ ಕಾರಣಾಂತರಗಳಿಂದ ಈ ಕಾರ್ಯ ನಡೆಯಲಿಲ್ಲ.

2013ರಲ್ಲಿ ಕಬ್ಬನ್ ಪಾರ್ಕ್ ನಡಿಗೆಯವರ ಸಂಘ (Cubbon Park Walkers' Association) ದ ಕೆಲವರು ಮಾರ್ಕ್ ಕಬ್ಬನ್ ರವರ 238ನೇ ಜನ್ಮದಿನಾಚರಣೆಯ ಅಂಗವಾಗಿ ಮಾರ್ಕ್ ಕಬ್ಬನ್ ರವರ ಮೂರ್ತಿಗೆ ಮಾಲಾರ್ಪಣೆ ಮಾಡಿದ್ದು ಕನ್ನಡಪರ ಸಂಘಟನೆಗಳು ಇನ್ನಷ್ಟು ಹೋರಾಟ ನಡೆಸಲು ಕಾರಣವಾಯಿತು. 2018ರ ಸ್ವಾತಂತ್ರ್ಯೋತ್ಸವ ಆಚರಣೆಯ ನಂತರ ವಕೀಲ ಎನ್.ಪಿ.ಅಮೃತೇಶ್ವರ ಅವರು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಿಗೆ ಪತ್ರವನ್ನು ಬರೆದು ಮಾರ್ಕ್ ಕಬ್ಬನ್ ರವರ ಶಿಲ್ಪವನ್ನು ಉಚ್ಚ ನ್ಯಾಯಾಲಯದ ಆವರಣದಿಂದ ತೆಗೆಸಿ ಮನ್ನಣೆ ಕಡಿಮೆ ಇರುವ ಸ್ಥಳಕ್ಕೆ ಸ್ಥಳಾಂತರಿಸುವಂತೆ ಕೋರಿದರು. ಈ ಪತ್ರದಲ್ಲಿ ಅವರು, ನಮ್ಮ ಪೂರ್ವಿಕರು ಸ್ವಾತಂತ್ರ್ಯಕ್ಕಾಗಿ ರಕ್ತವನ್ನು ಹರಿಸಿದ್ದು, ವಸಾಹತು ಆಳ್ವಿಕೆಯಲ್ಲಿ ನಮ್ಮನ್ನು ತುಳಿತಕ್ಕೆ ಒಳಪಡಿಸಿದ ಬ್ರಿಟಿಷ್ ಅಧಿಕಾರಿಯ ಶಿಲ್ಪವನ್ನ ಉಚ್ಚ ನ್ಯಾಯಾಲಯದ ಆವರಣದಲ್ಲಿ ಇಟ್ಟುಕೊಳ್ಳುವುದು ನ್ಯಾಯಯುತವಾಗಿಲ್ಲ. ಅಶ್ವರೋಹಿ ಮಾರ್ಕ್ ಕಬ್ಬನ್‌ನ ಈ ಮೂರ್ತಿಯು ಸ್ವತಂತ್ರ ಪೂರ್ವ ಭಾರತದ ಕುರುಹು ಮಾತ್ರ. ಬ್ರಿಟಿಷರು ಭಾರತವನ್ನು ಕೊಳ್ಳೆ ಹೊಡೆದಿದ್ದು, ಅವರ ಆಳ್ವಿಕೆಯ ನಾವು ಹೆಮ್ಮೆಯಿಂದ ಕಾಯ್ದುಕೊಳ್ಳಬೇಕಾದ ಪರಂಪರೆ ಅಲ್ಲ. ಉಚ್ಚ ನ್ಯಾಯಾಲಯದಲ್ಲಿ ಪ್ರತಿ ಆಗಸ್ಟ್ 15 ಮತ್ತು ಜನವರಿ 26ರಂದು ಮಾರ್ಕ್ ಕಬ್ಬನ್‌ರ ಮೂರ್ತಿಯನ್ನ ಬಟ್ಟೆಯಿಂದ ಮುಚ್ಚಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುತ್ತೇವೆ. ಇದು ಮೂರ್ತಿಯನ್ನು ಕಾಪಾಡುವ ಪ್ರಯತ್ನವೇ ಅಥವಾ ಬ್ರಿಟಿಷ್ ಗುಲಾಮಗಿರಿಯನ್ನ ಮುಚ್ಚಿಡುವ ಪ್ರಯತ್ನವೇ ಎಂದು ಸುದೀರ್ಘ ಪತ್ರ ಬರೆದರು. ಈ ಪತ್ರದ ನಂತರ ಹೈಕೋರ್ಟ್ ಆವರಣದಲ್ಲಿರುವ ಮಾರ್ಕ್ ಕಬ್ಬನ್‌ರವರ ಮೂರ್ತಿಯನ್ನು ತೆಗೆದು ಭಾರತೀಯ ಪರಂಪರೆಗೆ ಸಂಬಂಧಿಸಿದ ಮೂರ್ತಿಯನ್ನು ಪ್ರತಿಷ್ಠಾಪಿಸುವಂತೆ ಮತ್ತು ಮಾರ್ಕ್ ಕಬ್ಬನ್‌ರವರ ಮೂರ್ತಿಯನ್ನು ಸ್ಥಳಾಂತರಿಸುವಂತೆ ಹೈಕೋರ್ಟಿಗೆ ಕೆಲ ವಕೀಲರು ಮನವಿ ಸಲ್ಲಿಸಿದರು. ಇದರೊಂದಿಗೆ ಕಬ್ಬನ್‌ನ ಮೂರ್ತಿಯು ಹೈಕೋರ್ಟ್ ಆವರಣದಲ್ಲಿ ಇರುವುದರಿಂದ ಹೈಕೋರ್ಟ್‌ನ ಅನುಮತಿ ಇಲ್ಲದೆ ಮಾರ್ಕ್ ಕಬ್ಬನ್‌ನ ಮೂರ್ತಿಯನ್ನು ವೀಕ್ಷಿಸಲು ಪ್ರವಾಸಿಗರಿಗೆ ಅವಕಾಶವಿರಲಿಲ್ಲ. ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಹೈಕೋರ್ಟ್ ಆವರಣಕ್ಕೆ ಪ್ರವೇಶಿಸುವುದು ಉಚ್ಚ ನ್ಯಾಯಾಲಯದ ಘನತೆಗೆ ತಕ್ಕದಲ್ಲ ಮತ್ತು ಸೂಕ್ತವಲ್ಲ ಎಂಬ ವಾದವು ಆರಂಭವಾಯಿತು.

ಕೊನೆಗೆ 2019ರ ಅಕ್ಟೋಬರ್ ತಿಂಗಳ ಆರಂಭದಲ್ಲಿ ಉಚ್ಚ ನ್ಯಾಯಾಲಯವು ಸೂಕ್ತ ಸ್ಥಳಕ್ಕೆ ಮಾರ್ಕ್ ಕಬ್ಬನ್‌ರ ಮೂರ್ತಿಯನ್ನು ಸ್ಥಳಾಂತರಿಸುವಂತೆ ತೋಟಗಾರಿಕೆ ಇಲಾಖೆಗೆ ಆದೇಶ ಹೊರಡಿಸಿತು. ನಂತರ ತೋಟಗಾರಿಕೆ ಇಲಾಖೆಯು ಕಬ್ಬನ್ ಪಾರ್ಕ್‌ನ ವಾದ್ಯರಂಗ ಮುಂಭಾಗದ ಸ್ಥಳವನ್ನು ಕಬ್ಬನ್ ಮೂರ್ತಿಗಾಗಿ ತೆರವುಗೊಳಿಸಿತು. ಕೊನೆಯದಾಗಿ 29ನೇ ಜೂನ್ 2020ರಂದು ಮಾರ್ಕ್ ಕಬ್ಬನ್‌ನ ಮೂರ್ತಿಯನ್ನು ಕಬ್ಬನ್ ಪಾರ್ಕ್‌ನ ವಾದ್ಯರಂಗದ ಮುಂಭಾಗಕ್ಕೆ ತೋಟಗಾರಿಕೆ ಇಲಾಖೆಯು ಸ್ಥಳಾಂತರಿಸಿತು. ಇದೇ ಮೊದಲ ಬಾರಿಗೆ ಕಬ್ಬನ್ ರವರ ಮೂರ್ತಿಯನ್ನು ಸ್ಥಳಾಂತರಿಸಲಾಗಿದೆ. ಕಬ್ಬನ್‌ರ ಮೂರ್ತಿಯನ್ನು ಎರಡು–ಮೂರು ಬಾರಿ ಸ್ಥಳಾಂತರಿಸಲಾಗಿದೆ ಎಂಬ ವಾದಗಳು ಇದ್ದು, ಇವು ಸತ್ಯಕ್ಕೆ ದೂರವಾದ ಅಂಶಗಳು.

## ಕೊನೆ ಟಿಪ್ಪಣಿಗಳು:

1. C. Hayavadana Rao, Mysore Gazetteer, Vol–2, Part–4, The Government Press Bangalore, 1930, pg.2908
2. The Illustrated London News, Vol.49, 1866, Jan–Jun, Dated May 5, 1866, Pg.450, babel.hathitrust.org
3. Ibid
4. Ibid

## ಪರಾಮರ್ಶನ ಗ್ರಂಥಗಳು:

1. C Hayavadana Rao, Mysore Gazetteer, Vol–2, Part–4, The Government Press, Bangalore, 1930.
2. The Illustrated London News, Vol–49, 1866, Jan–Jun, babel hathitrust.org
3. A case of controversial status comes to an end, Bangalore Mirror –30, June–2020.
4. Sir Mark Cubbon Statue moved into park premises, 29th June 2020.
5. Advocate aims to tell Sir Cubbon: on your mark, get set, go! Bangalore Mirror, Aug–18, 2018

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.